1.ಆಡಿಸಿ ನೋಡು ಬೀಳಿಸಿ ನೋಡು ಉರುಳಿ ಹೋಗದು

ಆಡಿಸಿ ನೋಡು ಬೀಳಿಸಿ ನೋಡು ಉರುಳಿ ಹೋಗದು

ಏನೇ ಬರಲಿ ಯಾರಿಗೂ ಸೋತು ತಲೆಯ ಬಾಗದು

ಎಂದಿಗೂ ನಾನು ಹೀಗೆ ಇರುವೆ ಎಂದು ನಗುವುದು

ಹೀಗೆ ನಗುತಲಿರುವುದು ||

ಆಡಿಸಿ ನೋಡು ಬೀಳಿಸಿ ನೋಡು ಉರುಳಿ ಹೋಗದು

ಗುಡಿಸಲೇ ಆಗಲಿ ಅರಮನೆ ಆಗಲಿ ಆಟ ನಿಲ್ಲದು

ಹಿರಿಯರೇ ಇರಲಿ ಕಿರಿಯರೆ ಬರಲಿ ಬೇದ ತೋರದು..

ಕಷ್ಟವೋ ಸುಖವೋ ಅಳುಕದೆ ಆಡಿ

ತೂಗುತಿರುವುದು .. ತೂಗುತಿರುವುದು..||

ಆಡಿಸಿ ನೋಡು ಬೀಳಿಸಿ ನೋಡು ಉರುಳಿ ಹೋಗದು

ಮೈಯನೆ ಹಿಂಡಿ ನೊಂದರು

ಕಬ್ಬು ಸಿಹಿಯ ಕೊಡುವುದು ..

ತೇಯುತಲಿದ್ದರು ಗಂಧದ ಪರಿಮಳ ತುಂಬಿ ಬರುವುದು ..

ತಾನೆ ಉರಿದರು ದೀಪವು ಮನೆಗೆ ಬೆಳಕ ತರುವುದು ..

ದೀಪ .. ಬೆಳಕ ತರುವುದು ..||

ಆಡಿಸಿ ನೋಡು ಬೀಳಿಸಿ ನೋಡು ಉರುಳಿ ಹೋಗದು

ಆಡಿಸುವಾತನ ಕೈ ಚಳಕದಲಿ ಎಲ್ಲ ಅಡಗಿದೆ

ಆತನ ಕರುಣೆಯೇ ಜೀವವ ತುಂಬಿ ಕುಣಿಸಿ ನಲಿಸಿದೆ

ಆ ಕೈ ಸೋತರೆ ಬೊಂಬೆಯ ಕತೆಯು

ಕೊನೆಯಾಗುವುದೇ .. ಕೊನೆಯಾಗುವುದೇ ..

ಆಡಿಸಿ ನೋಡು ಬೀಳಿಸಿ ನೋಡು ಉರುಳಿ ಹೋಗದು

ಏನೇ ಬರಲಿ ಯಾರಿಗೂ ಸೋತು ತಲೆಯ ಬಾಗದು

ಎಂದಿಗೂ ನಾನು ಹೀಗೆ ಇರುವೆ ಎಂದು ನಗುವುದು

ಹೀಗೆ ನಗುತಲಿರುವುದು ..

ಆಡಿಸಿ ನೋಡು ಬೀಳಿಸಿ ನೋಡು ಉರುಳಿ ಹೋಗದು

*****

3.ಗಜವದನ ಬೇಡುವೆ | ಗೌರೀತನಯ

ಗಜವದನ ಬೇಡುವೆ

ತ್ರಿಜಗವಂದಿತನೆ ಸುಜನರ ಪೊರೆವನೆ ||ಪ||

ಪಾಶಾಂಕುಶಧರ ಪರಮಪವಿತ್ರ

ಮೂಷಿಕವಾಹನ ಮುನಿಜನಪ್ರೇಮ ||೧||

ಮೋದದಿ ನಿನ್ನಯ ಪಾದವ ತೋರೋ

ಸಾಧುವಂದಿತನೆ ಆದರದಿಂದಲಿ ||೨||

ಸರಸಿಜನಾಭ ಶ್ರೀ ಪುರಂದರವಿಠಲನ

ನಿರುತ ನೆನೆಯುವಂತೆ ದಯ ಮಾಡೋ ||೩||

2.ಹೆಮ್ಮೆ ನನಗೆ ಅಮ್ಮ

ಲಕ್ಷ್ಮೀನಾರಾಯಣ ಭಟ್ಟ ಎನ್ ಎಸ್

ಹೆಮ್ಮೆ ನನಗೆ ಅಮ್ಮ ನಿನ್ನ
ತಾಯಿಯೆಂದು ಕರೆಯಲು
ಕಂದನೆಂಬ ನಿನ್ನ ಪ್ರೀತಿ
ಸವಿಯು ಜೇನಿಗಿಂತಲು

ಏನು ತಾನೆ ಇದ್ದರೂ
ನಿನಗೂ ಸಿರಿವಂತರು?
ಬಲ್ಲೆ ನಾನೆ ಇರುವರೆಷ್ಟೋ
ನಿನಗೂ ಧೀಮಂತರು;
ಬಾಳಿಬಂದ ಗರಿಮೆಯಲ್ಲಿ
ಯಾರು ಸಮಕೆ ಬರುವರು?
ತಾಳಿ ನಿಂತ ಸಹನೆಯಲ್ಲಿ
ನಿನ್ನ ಯಾರು ಗೆಲುವರು?

ಪ್ರಾಚೀನ ಎನಿಸಿದರೂ
ಚಿರನೂತನೆ ನೀನು
ವೇದಮೂಲವಾದ ಜ್ಞಾನ-
ಸುಧೆಗೆ ನೀನು ಧೇನು;
ಕೋಟಿ ಕೋಟಿ ಬೆಳಗು ಅರಳಿ
ನಿನ್ನ ಪಾದ ತೊಳೆದಿವೆ
ನಿನ್ನ ಕಾಣಲೆಂದೆ ಚಂದ್ರ
ತಾರೆ ನಭದಿ ನೆರೆದಿವೆ.
ತಂಪು ಆಲದಡಿಗೆ ಬಂದು
ನಿಂತ ಭಕ್ತ ನಾನು
ಮೇಲಿನಿಂದ ಕೆಳಗುರುಳಿದ
ಬಿತ್ತವಾದರೇನು?
ನನ್ನ ಮನದಿ ಅರಳುತ್ತಿದೆ
ತಾಯೆ ನಿನ್ನ ರೂಪ
ಕಂಪು ಬೀರಿ ಸುತ್ತಲೆಲ್ಲ
ಹರಡಿ ನಿಲುವ ಧೂಪ.

*****

೪.ಬಂದೇ ಬರುವವು ಬಂಗಾರದ
ಹೊಂಗಿರಣದ ನಾಳೆಗಳು

ಬಣ್ಣ ಬಣ್ಣದಾ ಬದುಕನು ಬರೆಯಲು

ತೆರೆದಿವೆ ಹಾಳೆಗಳು॥

ಎಲ್ಲೆಲ್ಲೂ ಹೊಗೆಯಾಡಿದ ನೋವೆ
ಅಳುಕದಿರಲಿ ಮನವೇ

ಕಲಕದೆ ಬಾಳು ತಿಳಿವುದೆ ಹೇಳು ಜಗದ
ದುಃಖ ನೋವ ॥೧॥

ನಾಳೆಯು ಬಾಳಿನ ಸವಿಯುನು ಕನಸದ
ಜೀವವಿಲ್ಲ ಜಗದೀ

ಅಸೆಯ ಅಮೃತದ ಸಿಂಚನವಾಗಿದೆ
ಸೆರೆಯಾಗದೆ ಜಲಧೀ ॥೨॥

ಬಂದೇ ಬರುವವು ನಾಳೆಗಳು ಬೆಳಕಿನ
ತಾರೆಗಳು

ಬಂದೇ ಬರುವವು ನಾಳೆಗಳು ಹೊನ್ನಿನ
ಕಿರಣಗಳು ॥೩॥

೫.ಕುಹೂ ಕುಹೂ ನೀ ಕೋಗಿಲೆಯೆ
ನಾ ಹಾಡುವ ಹಾಡೊಂದ ಹಾಡುವೆಯಾ
ನಾ ಹೇಳುವ ಮಾತೊಂದ ಕೇಳುವೆಯಾ

ಚಿಗುರಿನ ಬನದಲಿ ನೀನಿರುವೆ
ನೀ ಕೂಗುವ ಧ್ವನಿಯಲಿ ನಾನಿರುವೆ
ಹಾಡುತ ಕುಳಿತರೆ ದಿನವೆಲ್ಲಾ ನಾ
ನೋಡುತಲಿರುವೆ ಮನವೆಲ್ಲಾ ॥೧॥

ಭಾರತ ದೇಶದ ಬಾನಿನೊಳು
ಈ ಧ್ವನಿಗಳ ಮಾರ್ದನಿಗೊಳಿಸುವೆಯಾ
ಭಾವೈಕ್ಯತೆಯನು ಮೂಡಿಸಲು ನೀ
ಅಸಮಾನತೆಯನು ಅಳಿಸುವೆಯಾ ॥೨॥

ಭೇದ ಭಾವವ ಮರೆಸುವೆಯಾ
ನೀ ರಾಷ್ಟ್ರಾಭಿಮಾನವ ತುಂಬುವೆಯಾ
ಅಂಧಕಾರದ ಜನಗಳಿಗೆ ನೀ
ಅಮೃತವಾಣಿಯ ತಿಳಿಸುವೆಯಾ ॥೩॥